


■ ಚಿದಾನಂದ ಸಾಲಿ
ಕಲೆ: ಎಚ್. ಎಸ್. ಮೋನಪ್ಪ

# ಜಿಟಿ ಜಿಟಿ ಒಂದೇ ರಾಗ

ಮಳೆಯ ಹಸಿವಿನ್ನೂ ನೀಗಿದಂತಿಲ್ಲ.

ಬೆಳಗಿನಿಂದ ಒಂದೇ ಜಿಟಿ ಜಿಟಿ ರಾಗದಲ್ಲಿ ನುಡಿಯತೊಡಗಿತ್ತು.

ಫರ್ಜಾನಾ, ಗಂಗಮ್ಮ, ಮಂಜುನಾಥ ಮತ್ತು ಅಮರೇಶ ಇದ್ದಂಥ ಅಬ್ದುಲ್ಲನ ಟೀಮು ಟಾಟಾ ಸುಮೋದೊಂದಿಗೆ ರೆಡಿಯಾಗಿ ಬಂದು ನಿಂತಾಗ ಬೆಳಗಿನ ಏಳು ಗಂಟೆ. ಸುಮೋದ ಹಿಂದಿನ ಭಾಗದಲ್ಲಿ ಬಿಸ್ಕತ್ತಿನ ಚೀಲಗಳನ್ನು ಒಟ್ಟಲಾಗಿತ್ತು. ಸುಮೋದೊಳಗೆ ತೂರಿಕೊಂಡ ತಿಮೋತಿಗೆ ಅಲ್ಲಿ ಸೀಟ್ ಮೇಲೆ ಹರವಿದ್ದ ನಾಲ್ಕೈದು ಪೇಪರ್‌ಗಳನ್ನು ನೋಡಿ ಖುಷಿಯಾಯಿತು. ಗಾಡಿಯಲ್ಲಿ ಒಂದು ಬಗೆಯ ಸೂತಕದ ಕಳೆ ಆವರಿಸಿಕೊಂಡಿತ್ತು. ತಿಮೋತಿ ಒಂದೊಂದಾಗಿ ಮುಖಪುಟಗಳನ್ನು ನೋಡತೊಡಗಿದ.

ನೂರು ದಾಟಿದ ಸಾವಿನ ಸಂಖ್ಯೆ; ಸರ್ಕಾರದ ವತಿಯಿಂದ ನೂರು ಕೋಟಿ ರೂಪಾಯಿ ಬಿಡುಗಡೆ; ಪರಿಹಾರ ಕಾರ್ಯಕ್ಕೆ ಸೇನೆಯ ನೆರವು; ಪ್ರಧಾನಿಯವರ ನಿಧಿಯಿಂದ ಸಂತ್ರಸ್ತ ಕುಟುಂಬಗಳಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಘೋಷಣೆ; ನೆಲಸಮವಾಗಿರುವ ಮೂವತ್ತಾರು ಸಾವಿರಕ್ಕೂ ಹೆಚ್ಚು ಮನೆಗಳವರಿಗೆ ಬದಲಿ ಮನೆ ಕಟ್ಟಿಕೊಡಲು ಚಿಂತನೆ; ಜಲಾವೃತ ಹಳ್ಳಿಗಳ ಸ್ಥಳಾಂತರಕ್ಕೆ ಪ್ರಥಮಾದ್ಯತೆ; ಎಲ್ಲೆಡೆ ಸ್ಥಗಿತಗೊಂಡ ರಸ್ತೆ ಮತ್ತು ರೈಲು ಸಂಪರ್ಕ ವ್ಯವಸ್ಥೆ; ಕಲ್ಲಿದ್ದಲು ತೊಯ್ದು ವಿದ್ಯುತ್ ಉತ್ಪಾದನೆ ಸ್ಥಗಿತ, ರಾಜ್ಯದ ಮಳೆಪೀಡಿತ ಉತ್ತರ ಭಾಗದಲ್ಲಿ ಅನಿಯಮಿತ ಲೋಡ್‌ಶೆಡ್ಡಿಂಗ್; ಪರಿಹಾರ ಕಾರ್ಯ ವಿಳಂಬ, ಅಧಿಕಾರಿಗಳಿಗೆ ಗೃಹಬಂಧನ; ನೆರೆ ರಾಜ್ಯದಲ್ಲಿ 800 ಜನ ನಾಪತ್ತೆ, 16ಕ್ಕೇರಿದ ಸಾವಿನ ಸಂಖ್ಯೆ, 4.5 ಲಕ್ಷ ಮಂದಿ ಸ್ಥಳಾಂತರ; ಉದ್ರಿಕ್ತ ಜನರಿಂದ ನಗರಸಭೆ

